## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 30-11-2022

### ಬೀದರ ಗ್ರಾಮೀಣ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 77/2022 ಕಲಂ 279, 304(ಎ) ಐಪಿಸಿ ಜೊತೆ 187 ಐಎಮ್.ವಿ. ಕಾಯ್ದೆ:-

ದಿನಾಂಕ 29/11/2022 ರಂದು ರಾತ್ರಿ 8.35 ಗಂಟೆಯ ಬೀದರ ಸರಕಾರಿ ಆಸ್ಪತ್ರೆಯಿಂದ ಮಾಹಿತಿ ಬಂದ ಮೇರೆಗೆ ಆತ್ರೆಯಲ್ಲಿದ ಫಿರ್ಯಾದಿ ಶ್ರೀ ವಿಶಾಲ ತಂದೆ ರಾಮಣ್ಣ ಹಿರಮಸೆ. ವಯ- 20 ಜಾ|| ಕ್ರಿಶ್ಚಿಯನ್ ಉ|| ಕೂಲಿಕೆಲಸ ಸಾ || ಕಮಠಾಣಾ ರವರು ತನ್ನ ಹೇಳಿಕೆ ಕೊಟ್ಟಿದ್ದು ಸಾರಾಂಶವೆನೆಂದರೆ ಇವರು ವೆಟರನರಿ ಕಾಲೇಜಿನಲ್ಲಿ ಪಿವುನ್ ಅಂತ ಕೆಲಸ ಮಾಡಿಕೊಂಡಿರುತ್ತಾರೆ. ನಮ್ಮ ತಂದೆ ರಾಮಣ್ಣಾ ರವರು ದಿನಾಲು ಮನೆಯಿಂದ ವೆಟರನರಿ ಕಾಲೇಜಿಗೆ ಕರ್ತವ್ಯ ಕುರಿತು ತಮ್ಮ ಮೋಟಾರ ಸೈಕಲ ನಂ ಕೆ.ಎ. 38 ವಿ 6360 ನೇಧರ ಮೇಲೆ ಹೋಗಿ ಬರುತ್ತಾರೆ. ದಿನನಿತ್ಯದಂತೆ ಮುಂಜಾನೆ ತಮ್ಮ ಮೋಟಾರ ಸೈಕಲ ಮೇಲೆ ವೆಟರನರಿ ಕಾಲೇಜಿಗೆ ಕರ್ತವ್ಯ ಕುರಿತು ಹೋಗಿ ನಂತರ ಸಾಯಾಂಕಾಲ 6.30 ಗಂಟೆಗೆ ಮೋಟಾರ ಸೈಕಲ ನಂ ಕೆ.ಎ. 38 ವಿ 6360 ನೇಧರ ಮೇಲೆ ಕಾಲೇಜದಿಂದ ಮರಳಿ ಮನೆಗೆ ಬರುವಾಗ ಕಮಠಾಣ ಮಡಿವಾಳೇಶ್ವರ ಚೌಕ ಹತ್ತಿರ ಹಿಂದಿನಿಂದ ಒಂದು ಅಟೋ ನೇದರ ಚಾಲಕನು ತನ್ನ ಅಟೋ ಅತೀವೇಗ ಮತ್ತು ನಿಷ್ಕಾಳಜಿಯಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ನಮ್ಮ ತಂದೆಯ ಮೋಟಾರ ಸೈಕಲಿಗೆ ಅಪಘಾತಪಡಿಸಿದರಿಂದ ಕೇಳಗೆ ಬಿದ್ದಾಗ ಅವರಿಗೆ ತಲೆಯ ಹಿಂದೆ ಹತ್ತಿ ಭಾರಿ ರಕ್ತಗಾಯ ಆಗಿದ್ದು ಮತ್ತು ಎಡಗಣ್ಣಿನ ಕೇಳಗೆ,ಎಡಗೈ ಮೋಳಕೈ ಹತ್ತಿರ, ಎಡಗಾಲ ತೋಡೆಗೆ ಮತ್ತು ಬಲಗಾಲ ಪಾದಕ್ಕೆ ಹತ್ತಿ ರಕ್ತಗಾಯ ಆಗಿರುತ್ತದೆ, ಘಟನೆ ನಂತರ ಅಪಘಾತಪಡಿಸಿದ ಅಟೋ ಚಾಲಕನು ತನ್ನ ಅಟೋ ನಿಲ್ಲಿಸದೇ ಓಡಿ ಹೋಗಿದ್ದು ಅದರ ನಂಬರ ನೋಡಲಾಗಿ ಅದರ ಮೇಲೆ ಕೆ.ಎ 38/8686 ಅಂತ ಬರೆದಿದ್ದು ಇರುತ್ತದೆ, ಮತ್ತು ಚಾಲಕನ ಹೆಸರು ಗೊತ್ತಿಲ್ಲಾ.ಘಟನೆ ನೋಡಿ ನಾನು ನಮ್ಮ ತಂದೆಗೆ ಚಿಕಿತ್ಸೆ ಕುರಿತು ಅಂಬುಲೆನ್ಸಲದಲ್ಲಿ ಬೀದರ ಸರಕಾರಿ ಆಸ್ಪತ್ರಗೆ ಸಾಯಾಂಕಾಲ 7.30 ಗಂಟೆಯ ಸುಮಾರಿಗೆ ದಾಖಲು ಮಾಡಿದಾಗ ವೈದ್ಯರು ಪರೀಕ್ಷೆ ಮಾಡಿ ತೀರಿಕೊಂಡಿರುತ್ತಾರೆ ಅಂತ ತಿಳಿಸಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಮನ್ನಾಎಖೇಳ್ಳಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 126/2022 ಕಲಂ 78 ಕೆಪಿ ಕಾಯ್ದೆ :-

ದಿನಾಂಕ:29-11-2022 ರಂದು 13:30 ಗಂಟೆಗೆ ನಾನು ಸುದರ್ಶನರಡ್ಡಿ ಪಿ.ಎಸ್.ಐ(ಕಾ.ಸೂ) ಮನ್ನಾಎಖೇಳ್ಳಿ ಪೊಲೀಸ ಠಾಣೆಯಲ್ಲಿದ್ದಾಗ ಫೊನ್ ಮುಖಾಂತರ ಬಾತ್ಮೀ ಬಂದಿದ್ದೇನೆAದರೆ ನಿರ್ಣಾ ಗ್ರಾಮದ ಎಸ್.ಬಿ.ಐ ಬ್ಯಾಂಕ ಹತ್ತಿರ ಸಾರ್ವಜನಿಕ ರಸ್ತೆಯ ಪಕ್ಕದಲ್ಲಿ ಒಬ್ಬ ವ್ಯಕ್ತಿ ನಿಂತುಕೊAಡು ಸಾರ್ವಜನಿಕರಿಗೆ ಕಾನೂನು ಬಾಹಿರವಾಗಿ ಒಂದು ರೂಪಾಯಿಗೆ 80/-ರೂಪಾಯಿ ಎಂದು ಕೂಗಿ ಹೇಳಿ ಸಾರ್ವಜನಿಕರಿಂದ ಹಣಪಡೆದು ನಸಿಬಿನ ಮಟಕಾ ಚೀಟಿ ಬರೆದುಕೊಳ್ಳುತ್ತಿದ್ದಾನೆ ಅಂತ ಖಚಿತ ಬಾತ್ಮಿ ಬಂದ ಮೇರೆಗೆ ಸಿಬ್ಬಂದಿಯೊAದಿಗೆ ನಿರ್ಣಾ ಗ್ರಾಮದ ಎಸ್.ಬಿ.ಐ ಬ್ಯಾಂಕ ಹತ್ತಿರ ಸಾರ್ವಜನಿಕ ರಸ್ತೆಯ ಮೇಲೆ ಒಬ್ಬ ವ್ಯಕ್ತಿ ನಿಂತುಕೊAಡು ಸಾರ್ವಜನಿಕರಿಗೆ ಕಾನೂನು ಬಾಹಿರವಾಗಿ ಒಂದು ರೂಪಾಯಿಗೆ 80/-ರೂಪಾಯಿ ಎಂದು ಕೂಗಿ ಹೇಳಿ ಸಾರ್ವಜನಿಕರಿಂದ ಹಣಪಡೆದು ನಸಿಬಿನ ಮಟಕಾ ಚೀಟಿ ಬರೆದುಕೊಳ್ಳುತ್ತಿದ್ದು ನೋಡಿ ಖಚಿತಪಡಿಸಿಕೊಂಡು ದಾಳಿ ಮಾಡಿ ವ್ಯಕ್ತಿಗಳ ಹೆಸರು ವಿಳಾಸ ವಿಚಾರಿಸಲು ಶಿವಶಂಕರಯ್ಯಾ ತಂದೆ ಗುರಯ್ಯಾ ಜಿವಣಗಿ ವಯ 65 ವರ್ಷ ಜಾತಿ:ಸ್ವಾಮಿ ಉದ್ಯೋಗ: ಕೂಲಿ ಕೆಲಸ ಸಾ||ನಿರ್ಣಾ. ತಿಳಿಸಿದ್ದು ಪಿ.ಎಸ್.ಐ ರವರು ಆದನು ಅಂಗ ಝಡ್ತಿ ಮಾಡಲು ಆತನ ಹತ್ತಿರ 3080/- ರೂಪಾಯಿ ಸಿಕ್ಕಿದ್ದು ಸದರಿ ಹಣವನ್ನು ಯಾರಿಗೆ ಕೊಡುತ್ತಿ ಅಂತ ಅಂತ ವಿಚಾರಿಸಿದಾಗ ಸದರಿಯವನ್ನು ಸಾರ್ವಜನಿಕರಿಂದ ಪಡೆದ ಹಣವನ್ನು ಸಾಬೀರಮಿಯ್ಯಾ ತಂದೆ ಅಲ್ಲಾವಲಿ ಫಕೀರ ವಯ 30 ವರ್ಷ ಜಾತಿ:ಮುಸ್ಲಿಂ ಉದ್ಯೋಗ; ಕೂಲಿ ಕೆಲಸ ಸಾ||ನಿರ್ಣಾ ಈತನಿಗೆ ಕೊಡುವದಾಗಿ ತಿಳಿಸಿರುತ್ತಾನೆ. ನಂತರ ನಗದು ಹಣ 3080/- ರೂ ಮತ್ತು ಒಂದು ಕಿ ಪ್ಯಾಡ್ ಫೋನ್ ಅ.ಕಿ 500/-, ಒಂದು ಬಾಲ ಪೇನ್ನ, ಎರಡು ಮಟ್ಕಾ ಚೀಟಿ ನೇದವುಗಳನ್ನು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.